**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

**CC No.:- 660/2014**

**C.W.:-2**

**P.W.:-2**

ಸಾಕ್ಷಿದಾರರ ಹೆಸರು : ರಾಮಾ ಅಲಿಯಾಸ ರಾಜು ಲಕ್ಷ್ಮಣ ಉಡುಗೆ

ವಯಸ್ಸು : 40 ವರ್ಷ

ಉದ್ಯೋಗ : ಒಕ್ಕುತನ

ಸಾಕೀನ : ಬಳನಾಳಗಡ್ಡೆ

**ಸಾಕ್ಷಿಗೆ ಈ ದಿನ ದಿಃ 13-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ-**

ಸಾಕ್ಷಿ ಘಟನಾ ಸ್ಥಳದ ಪಂಚನಾಮೆ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.- 2 ಎಂದು ಹಾಗೂ ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ.- 2-ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುಮಾರು 2014-15 ರಲ್ಲಿ ನಮ್ಮ ಮನೆಯ ಹತ್ತಿರ ಪೊಲೀಸರು ಬಂದು ನನ್ನ ಸಹಿ ಪಡೆದಿರುತ್ತಾರೆ. ಸದರಿ ಸಹಿಯನ್ನು ಪೊಲೀಸರು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಅದೇ ಸಮಯದಲ್ಲಿ ಪೊಲೀಸರು ಒಂದು ಭಾವ ಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಪೊಲೀಸರು ಯಾವ ಕಾರಣಕ್ಕೆ ಸದರಿ ಫೋಟೋವನ್ನು ತೆಗೆದಿರುತ್ತಾರೆಂದು ಗೊತ್ತಿಲ್ಲ, ಪೊಲೀಸರು ನಿಲ್ಲಲು ಹೇಳಿದ್ದಕ್ಕೆ ನಿಂತಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯ ರೀಪ್, ಕಾಡು ಕಟ್ಟಿಗೆ ಬಡಿಗೆ, ಕಬ್ಬಿಣದ ಚಳಿ, ಸೈಕಲ್ ಚೈನ, ಇಟ್ಟಿಗೆಯ ತುಕುಡಿಯನ್ನು ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿಲ್ಲ. ನಾನು ಆರೋಪಿಯನ್ನು ನೋಡಿರುವುದಿಲ್ಲ.

ಸಾಕ್ಷಿಯು ಬಟ್ಟೆ ಜಪ್ತಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2014 ರಲ್ಲಿ ನಿಪಿ 2 ರ ಪಂಚನಾಮೆಗೆ ಸಹಿ ಮಾಡುವಾಗ ಮಾಡಿರುತ್ತೇನೆ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಪೊಲೀಸರು ಯಾವ ಕಾರಣಕ್ಕೆ ಮಾಡಿರುತ್ತಾರೆಂದು ಗೊತ್ತಿಲ್ಲ. ಅದೇ ಸಮಯದಲ್ಲಿ ಪೊಲೀಸರು ಒಂದು ಭಾವ ಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಪೊಲೀಸರು ಯಾವ ಕಾರಣಕ್ಕೆ ಸದರಿ ಫೋಟೋವನ್ನು ತೆಗೆದಿರುತ್ತಾರೆಂದು ಗೊತ್ತಿಲ್ಲ, ಪೊಲೀಸರು ನಿಲ್ಲಲು ಹೇಳಿದ್ದಕ್ಕೆ ನಿಂತಿರುತ್ತೇನೆ.

- 2 -

ನ್ಯಾಯಾಲಯದ ಮುಂದೆ ಇರುವ ಬನಿಯನ್, ಗೌನ್ ಮತ್ತು ಕೈ ವಸ್ತ್ರಗಳನ್ನು ನಾನು ಈ ಮುಂಚೆ ನೋಡಿರುವುದಿಲ್ಲ. ಅವುಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲು- ಎ. ಪಿ. ಪಿ. ಅವರಿಂದ-**

ದಿನಾಂಕ 16-01-2014 ರಂದು ಚಾ.ಸಾ 17 ರವರು ನನ್ನನ್ನು ಹಾಗೂ ಚಾಸಾ 3 ರವರನ್ನು ಇಂದಿರಾ ನಗರದ ಚಾಸಾ 1 ಹಾಗೂ ಚಾಸಾ 4 ರವರ ಹೊಸದಾಗಿ ಕಟ್ಟುತ್ತಿರುವ ಮನೆಯ ಮುಂದೆ ಬರಮಾಡಿಕೊಂಡು ಚಾಸಾ 1 ರವರು ಹೇಳಿ ತೋರಿಸಿದ ಘಟನಾ ಸ್ಥಳದಲ್ಲಿ ನಿಪಿ 2 ರಂತೆ ಮಧ್ಯಾಹ್ನ 3-30 ರಿಂದ 5-00 ಗಂಟೆಯವರೆಗೆ ಪಂಚನಾಮೆ ಮಾಡಿ ಓದಿ ಹೇಳಿ ನಮ್ಮ ಸಹಿ ಪಡೆದಿರುತ್ತಾರೆಂದರೆ ಸರಿ ಅಲ್ಲ. ಪಂಚನಾಮೆ ಸಮಯದಲ್ಲಿ ಚಾಸಾ 1 ರವರು ತನಗೆ ಹಾಗೂ ಚಾಸಾ 4 ರವರಿಗೆ ಸದರಿ ವಶಪಡಿಸಿಕೊಂಡಿದ್ದ ವಸ್ತುಗಳಿಂದ ಅರೋಪಿತರು ಹಲ್ಲೆ ಮಾಡಿರುವುದಾಗಿ ಹೇಳಿರುತ್ತಾರೆಂದರೆ ಸರಿ ಅಲ್ಲ. ಪಂಚನಾಮೆ ಸಮಯದಲ್ಲಿ ಕಟ್ಟಿಗೆಯ ರೀಪ್, ಕಾಡು ಕಟ್ಟಿಗೆ ಬಡಿಗೆ, ಕಬ್ಬಿಣದ ಚಳಿ, ಸೈಕಲ್ ಚೈನ, ಇಟ್ಟಿಗೆಯ ತುಕುಡಿಯನ್ನು ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿರುತ್ತಾರೆಂದರೆ ಸರಿ ಅಲ್ಲ. ಅದೇ ಸಮಯದಲ್ಲಿ ನಿಪಿ 3 ರಂತೆ ಫೋಟೊ ತೆಗೆದಿರುತ್ತಾರೆಂದರೆ ಸರಿ ಅಲ್ಲ.

ದಿಃ 17-01-2014 ರಂದು ಚಾಸಾ 18 ರವರು ನನ್ನನ್ನು ಹಾಗೂ ಚಾಸಾ 3 ರವರನ್ನು ಇಂದಿರಾ ನಗರದ ಚಾಸಾ 1 ಹಾಗೂ ಚಾಸಾ 4 ರವರ ಹೊಸದಾಗಿ ಕಟ್ಟುತ್ತಿರುವ ಮನೆಯ ಮುಂದೆ ಬರಮಾಡಿಕೊಂಡು ಚಾಸಾ 1 ರವರು ಹೇಳಿ ಹಾಜರು ಮಾಡಿದ ನ್ಯಾಯಾಲಯದ ಮುಂದೆ ಇರುವ ಕ್ರೀಮ್ ಬಣ್ಣದ ಉದ್ದ ತೋಳದ ಲೈನಿಂಗ್ ಶರ್ಟ್, ಬಿಳಿ ಬಣ್ಣದ ಬನಿಯನ್, ಬಿಳಿ ಕೆಂಪು ಚುಕ್ಕಿ ಮಿಶ್ರಿತ ಗೌನ್ ಮತ್ತು ಬಿಳಿ ಬಣ್ಣದ ಕೈ ವಸ್ತ್ರ ಒಂದು ಪುಶ್ಕಳ ರಕ್ತ ಹತ್ತಿತ್ತು ಅವುಗಳನ್ನು ಬೆಳಿಗ್ಗೆ 9-00 ರಿಂದ 9-15 ಗಂಟೆಯವರೆಗೆ ಪಂಚನಾಮೆ ಮಾಡಿ ಪಂಚನಾಮೆ ಸಮಯದಲ್ಲಿ ಚಾಸಾ 1 ರವರು ತಾನು ಹಾಗೂ ಚಾಸಾ 4 ರವರು ಘಟನಾ ಸಮಯದಲ್ಲಿ ಧರಿಸಿರುವ ಬಟ್ಟೆಗಳು ಎಂದು ಹಾಜರು ಪಡಿಸಿದ್ದರು ಎಂದರೆ ಸರಿ ಅಲ್ಲ. ಅದೇ ಸಮಯದಲ್ಲಿ ನಿಪಿ 4 ರಂತೆ ಫೋಟೊ ತೆಗೆದಿರುತ್ತಾರೆಂದರೆ ಸರಿ ಅಲ್ಲ. ನನಗೆ ಎಲ್ಲ ವಿಷಯಗಳು ಗೊತ್ತಿದ್ದರೂ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.